**<u>1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು</u>**

**<u>ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ</u>**

**OS**- 6/2022 **PW**-1

**ದಿಃ 04.02.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿ ಪರ ಶ್ರೀ ಎಸ ಎಸ ಅಂಗಡಿ ವಕೀಲರಿಂದಃ</u>**

ದಾವಾ ಆಸ್ತಿ ನಂಬರ 3 ಇದು ಧಾರವಾಡದ ನವೋದಯ ನಗರದಲ್ಲಿ ಇವೆ ಎಂದರೆ ಸರಿ. ದಾವಾ ಆಸ್ತಿ 3 ರ ನಂಬರ ಹೇಳಲು ಆಗುತ್ತದೇಯಾ ಎಂದರೆ ಸಾಕ್ಷಿ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ಸದರಿ ಆಸ್ತಿಗೆ ನೀವು ಎನು ಹೋಗಿ ನೋಡಿಲ್ಲವೆಂದರೆ ಸಾಕ್ಷಿ ಗೃಹ ಪ್ರವೇಶ ಸಮಯದಲ್ಲಿ ಹೋಗಿದ್ದೆ ಎನ್ನುತ್ತಾರೆ. ಸದರಿ ಆಸ್ತಿಯನ್ನು ಯಾರು ಯಾವಾಗ ಖರೀದಿ ಮಾಡಿದ್ದಾರೆಂಬ ವಿಷಯ ಗೊತ್ತಿದೇಯಾ ಎಂದರೆ ಸಾಕ್ಷಿ ಯಾವ ವರ್ಷ ಎಂಬುವುದು ನೆನಪಿಲ್ಲ, ಆದರೆ ನನ್ನ ಮಾವ ನನ್ನ ಯಜುಮಾನರು ಮತ್ತು ಅವರ ಅಣ್ಣ ಎಲ್ಲರು ಸೇರಿ ಖರೀದಿ ಮಾಡಿದ್ದಾರೆ ಎನ್ನುತ್ತಾರೆ. ಈಗ ಸದರಿ ಆಸ್ತಿ ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿ ಪ್ರತಿವಾದಿ 3 ರವರ ಹೆಸರಿನಲ್ಲಿ ಇದೆ ಎಂಬುವುದನ್ನು ನಾನು ಕೇಳಿದ್ದೇನೆ ಎನ್ನುತ್ತಾರೆ. ಸದರಿ ಆಸ್ತಿಯನ್ನು ಎಷ್ಟು ಹಣಕ್ಕೆ ಖರೀದಿ ಮಾಡಿದರು ಎಂದರೆ ಸಾಕ್ಷಿ ಅದು ಗೊತ್ತಿಲ್ಲ ಎನ್ನುತ್ತಾರೆ. ಸಾಕ್ಷಿಗೆ ಈ ಹಂತದಲ್ಲಿ ನೋಟರಿಯವರು ದೃಢೀಕರಿಸಲಾದ ಖರೀದಿ ಪತ್ರವನ್ನು ತೋರಿಸಿ ಇದನ್ನು ನೋಡಿ ಯಾರು ಯಾರಿಂದ ಎಷ್ಟು ಹಣಕ್ಕೆ ಖರೀದಿ ಮಾಡಿದರು ಎಂದರೆ ಸಾಕ್ಷಿ ದಾಖಲೆ ನೋಡಿ ಪ್ರತಿವಾದಿ 3 ಇವರು ಶ್ರೀಮತಿ ಫಕ್ಕೀರವ್ವ, ಸುಧೀರ, ಸುನೀಲ, ಸಂದೀಪ, ಶ್ರೀಮತಿ ಶೋಭಾ, ಶ್ರೀಮತಿ ಸುಧಾ ಇವರ ಒಟ್ಟು ಮೊಕ್ತಿಯಾರ ಪತ್ರದ ಪ್ರಕಾರ ರೂ.22,00,000/- ಗಳಿಗೆ ಖರೀದಿ ಮಾಡಿರುತ್ತಾರೆ ಎನ್ನುತ್ತಾರೆ. ಸದರಿ ದಾಖಲೆಯನ್ನು ನಿಶಾನೆ ಡಿ 3 ಎಂದು ಗುರ್ತಿಸಲಾಯಿತು. ಪ್ರತಿವಾದಿ ನಂಬರ 3 ಇವರು ಏಲ್ಲಿ ಇರುತ್ತಾರೆ ಎಂದರೆ ಸಾಕ್ಷಿ ಅಮೇರಿಕಾನಲ್ಲಿ ಇರುತ್ತಾರೆ ಎನ್ನುತ್ತಾರೆ. ಸದರಿಯವರು ಇಂಜನಿಯರ್ ಅಂದರೆ ಸಾಕ್ಷಿ ಅಲ್ಲ ಎನ್ನುತ್ತಾರೆ. ಅವರು ವೃತ್ತಿ ಎನು ಎಂದರೆ ಸಾಕ್ಷಿ ಅದು ಗೊತ್ತಿಲ್ಲ, ಅವರು ಬಿಎಸ್ಸಸಿ ಓದಿದ್ದು ಮಾತ್ರ ಗೊತ್ತು ಎನ್ನುತ್ತಾರೆ.

ದಾವಾ ನಂಬರ 3 ನೇ ಆಸ್ತಿಯನ್ನು ಪ್ರತಿವಾದಿ 3 ರವರು ತೆಗೆದುಕೊಳ್ಳಬೇಕಾದರೆ ಎಸ.ಬಿ.ಐ ಬ್ಯಾಂಕನವರು ರೂ.20,00,000/- ಗಳ ಸಾಲ ಮಂಜೂರು ಮಾಡಿರುತ್ತಾರೆಂದು ಸಾಕ್ಷಿಗೆ ಬ್ಯಾಂಕನವರು ನೀಡಿರುವ sanction letter ತೋರಿಸಿದಾಗ ಸಾಕ್ಷಿ ಅದನ್ನು ನೋಡಿ ಇರಬಹುದು ಎನ್ನುತ್ತಾರೆ. .ರೂ.22,00,000/- ದಲ್ಲಿ ರೂ.20,00,000/- ಗಳನ್ನು ಬ್ಯಾಂಕನವರು ಸಾಲ ನೀಡಿದ್ದು ಉಳಿದ ರೂ.2,00,000/-ಗಳನ್ನು ತಮ್ಮ ಖಾತೆಯಿಂದ ಚೆಕ್ ಮೂಲಕ ಪಾವತಿ ಮಾಡಿದ್ದಾರೆಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ.

ಸಾಕ್ಷಿಗೆ ಈ ಹಂತದಲ್ಲಿ ಬ್ಯಾಂಕನವರು ನೀಡಿರುವ ಸರ್ಟಿಫೀಕೇಟ ತೋರಿಸಿ ಸದರಿ ಪ್ರತಿವಾದಿ 3 ರವರು ರೂ.20,00,000/- ಸಾಲ ಪಡೆದಿದ್ದು ಅದನ್ನು ದಿಃ10-12-2010 ರಂದು ಸಂಪೂರ್ಣವಾಗಿ ಮರುಪಾವತಿ ಮಾಡಿ ಮುಕ್ತಾಯಗೊಳಿಸಿರುತ್ತಾರೆಂದು ದಾಖಲೆ ತೋರಿಸಿ ಹೇಳಿದ್ದಕ್ಕೆ ಇದರಲ್ಲಿ ಅದು ಇದೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಸದರಿ ಹಣವನ್ನು ಎಲ್ಲರೂ ಸೇರಿ ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ಎಲ್ಲರೂ ಸೇರಿ ಸದರಿ ಹಣವನ್ನು ಕೊಟ್ಟಿರುತ್ತಾರೆಂದು ಹೇಳಿದ್ದು ಈ ಬಗ್ಗೆ ದಾಖಲೆಯನ್ನು ನೀವೇನಾದರೂ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಅದೇ ಪ್ರಕಾರ ನನ್ನ ಗಂಡನಿಗೆ ಇಷ್ಟು ಆದಾಯ ಇತ್ತು ಎಂದು ತೋರಿಸಲು ಕಾಗದ ಪತ್ರ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಹಾಜರು ಮಾಡುತ್ತೇನೆ ಎನ್ನುತ್ತಾರೆ. ಈಗ ನಾನು ಹಾಜರುಪಡಿಸಿಲ್ಲವೆಂದರೆ ಸರಿ. ಪ್ರತಿವಾದಿ 3 ರವರು ತಮ್ಮ ಸ್ವಂತ ಹಣದಿಂದ ಆಸ್ತಿಯನ್ನು ಖರೀದಿ ಮಾಡಿದ್ದರು ಕೂಡಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿ ನಂಬರ 3 ರವರು ಒಳ್ಳೆಯ ಹುದ್ದೆಯಲ್ಲಿದ್ದು ಅವರಿಗೆ ಸಂಪಾದನೆ ಕೂಡಾ ಬಹಳಷ್ಟಿದ್ದು 2008 ನೇ ಸಾಲಿನಲ್ಲಿ ವಾರ್ಷಿಕ ರೂ. 11 ಲಕ್ಷ್ಯ 16 ಸಾವಿರ ಪ್ಯಾಕೇಜ್ ಸ್ಯಾಲರಿ ಇದ್ದು, 2010 ರಲ್ಲಿ 17 ಲಕ್ಷ್ಯ 52 ಸಾವಿರ, 2011 ರಲ್ಲಿ 18 ಲಕ್ಷ್ಯ 37 ಸಾವಿರ 828 ಸ್ಯಾಲರಿ ಇತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪ್ರತಿವಾದಿ ನಂಬರ 3 ರವರಿಗೆ ಇಷ್ಟು ಸ್ಯಾಲರಿ ಇದ್ದುದರಿಂದ ಅವರು ತಮ್ಮ ಸ್ವಂತ ಹಣದಿಂದ ಸದರಿ ಆಸ್ತಿಯನ್ನು ಖರೀದಿ ಮಾಡಿದ್ದು ಆ ಆಸ್ತಿ ಅವರ ಸ್ವಯಾರ್ಜಿತ ಆಸ್ತಿ ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ಆ ಕಾರಣಕ್ಕೆ ವೀಲ್ ನಲ್ಲಿ ಈ ಆಸ್ತಿಯ ಉಲ್ಲೇಖ ಇರುವುದಿಲ್ಲವೆಂದರೆ ಸಾಕ್ಷಿ ಮೊದಲು ವಿಲ್ ಆಗಿಲ್ಲವೆಂದು ನುಡಿದು ನಂತರ ಇಲ್ಲ ಎಂದು ನುಡಿಯುತ್ತಾರೆ. ಸದರಿ ಖರೀದಿಗೆ ಯಾರಿಂದಲೂ ಅವರು ಹಣದ ಸಹಾಯ ಪಡೆದಿಲ್ಲ ಅವರ ಸ್ವಂತ ಹಣದಿಂದಲೆ ಖರೀದಿ ಮಾಡಿದ್ದರು ನಾನು ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆಂದರೆ

ಸರಿಯಲ್ಲ. ರೂ.22,00,000/- ಕ್ರಯದ ಹಣವನ್ನು ಅವರು ಬ್ಯಾಂಕ ಮುಖಾಂತರವೆ ನೀಡಿರುತ್ತಾರೆಂದರೆ ಸಾಕ್ಷಿ ಕ್ಯಾಷ ಕೂಡಾ ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ಎಷ್ಟು ಕ್ಯಾಷ ಕೊಟ್ಟಿದ್ದಾರೆಂದರೆ ಸಾಕ್ಷಿ ಅದು ಗೊತ್ತಿಲ್ಲ ಎನ್ನುತ್ತಾರೆ.

ಪ್ರತಿವಾದಿ ನಂಬರ 3 ರವರ ಸ್ವಂತ ಆಸ್ತಿ ಆಗಿದ್ದರು ಕೂಡಾ ಅದನ್ನು ಹೊಡಿಯಬೇಕೆಂಬ ಉದ್ದೇಶದಿಂದ ನಾನು ಈ ದಾವೆಯಲ್ಲಿ ಸೇರಿಸಿದ್ದೇನೆಂದರೆ ಸರಿಯಲ್ಲ. ಪ್ಲಾಟ ನಂಬರ 261 ರ ಆಸ್ತಿ ನನ್ನ ಹೆಸರಿನಲ್ಲಿದೆ ಎಂದರೆ ಸರಿ. ಸಾಕ್ಷಿಗೆ ಈ ಹಂತದಲ್ಲಿ ಪ್ಲಾಟ ನಂಬರ 261 ಗೆ ಸಂಬಂಧಿಸಿದ ಉತಾರ ತೋರಿಸಲಾಗಿ ಸಾಕ್ಷಿ ಹೌದು ಅದರಲ್ಲಿ ಹೆಸರಿದೆ ಎನ್ನುತ್ತಾರೆ. ಸದರಿ ದಾಖಲೆಯನ್ನು ನಿಶಾನೆ ಡಿ 4 ಎಂದು ಗುರ್ತಿಸಲಾಯಿತು.

ಪ್ಲಾಟ ನಂಬರ 261 ಇದನ್ನು ಪ್ರತಿವಾದಿ ನಂಬರ 1 ರವರು ಸಿದ್ರಾಮಪ್ಪ ತೆಂಗಿನಕಾಯಿ ಇವರಿಂದ ಖರೀದಿ ಮಾಡಿದ್ದು ಎಂದು ಸಾಕ್ಷಿಗೆ ಖರೀದಿ ಪತ್ರದ ಜರಾಕ್ಸ ಪ್ರತಿಯನ್ನು ತೋರಿಸಲಾಗಿ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನಿಶಾನೆ ಡಿ 5 ಎಂದು ಗುರ್ತಿಸಲಾಯಿತು.

ಸಾಕ್ಷಿಗೆ ಬಕ್ಷೀಸ ಪತ್ರದ ಜರಾಕ್ಸ ಪ್ರತಿಯನ್ನು ತೋರಿಸಿ ಈ ಪತ್ರದ ಪ್ರಕಾರ ನಿಮಗೆ ಬಕ್ಷೀಸ ಮಾಡಿದ್ದು ಎಂದು ತೋರಿಸಲಾಗಿ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನಿಶಾನೆ ಡಿ 6 ಎಂದು ಗುರ್ತಿಸಲಾಯಿತು. ಪ್ರತಿವಾದಿ ನಂಬರ 1 ತನ್ನ ಸಣ್ಣ ಮಗನಿಗೆ ಈ ಆಸ್ತಿಯನ್ನು ಗಿಫ್ಟ ಮಾಡಿರುತ್ತಾರೆಂದರೆ ಸರಿ. ನನ್ನ ಯಜುಮಾನರು ಮರಣ ಹೊಂದಿದ ನಂತರ ಆ ಆಸ್ತಿಗೆ ಹೆಂಡತಿ ಮತ್ತು ಮಕ್ಕಳ ಹೆಸರನ್ನು ಮಾತ್ರ ವಾರಸಾ ಪ್ರಕಾರ ಹಚ್ಚಿದ್ದು ತಾಯಿ ಹೆಸರನ್ನು ಬಿಟ್ಟಿದ್ದೇವೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮತ್ತು ಮುಂದುವರೆದು ಸದರಿ ಹಣವನ್ನು ನನ್ನ ಯಜಮಾನರು ಕೊಟ್ಟಿದ್ದರಿಂದ ನಮ್ಮ ಹೆಸರನ್ನು ಹಚ್ಚಿಸಿಕೊಂಡಿದ್ದೇವೆ ಎನ್ನುತ್ತಾರೆ. ರೂ.2 ಲಕ್ಷ 40 ಸಾವಿರ ರೂಪಾಯಿಗಳನ್ನು ನನ್ನ ಮನೆಯವರು ಕೊಟ್ಟು ಅದನ್ನು ತಾಯಿ ಹೆಸರಿಗೆ ಖರೀದಿಸಿ ನಂತರ ಗಿಫ್ಟ ಎಂಬುದಾಗಿ ಮಾಡಿಸಿಕೊಂಡಿರುತ್ತಾರೆಂದು ಸಾಕ್ಷಿ ನುಡಿಯುತ್ತಾರೆ. ಯಾವ ಕಾರಣಕ್ಕೆ ತಾಯಿಯ ಹೆಸರಿನಲ್ಲಿ ಮಾಡಿಸಿದರು ಎಂದರೆ ಸಾಕ್ಷಿ ತಾಯಿ ಹೆಸರಿನಲ್ಲಿಯೆ ಇರಲಿ ಎಂದು ಮಾಡಿಸಿದ್ದು ನಂತರ ಬೇಡಾ ಎಂದು ಗಿಫ್ಟ ಮಾಡಿಸಿಕೊಂಡಿರುತ್ತಾರೆ ಎನ್ನುತ್ತಾರೆ. ನನ್ನ ಯಜಮಾನರು

ಹಣ ಎಲ್ಲಿಂದ ತಂದರು ಎಂಬ ಬಗ್ಗೆ ದಾಖಲೆಯನ್ನು ಎನಾದರೂ ಹಾಜರುಪಡಿಸಿದ್ದೀರಾ ಎಂದರೆ ಇಲ್ಲವೆಂದು ನುಡಿಯುತ್ತಾರೆ. 2005 ನೇ ಸಾಲಿನಲ್ಲಿ ನನ್ನ ಯಜಮಾನರು ನನ್ನ ತಂದೆಯ ಜೊತೆ ಟ್ರಾನ್ಸಪೋರ್ಟ ವ್ಯವಹಾರದಲ್ಲಿ ಕೆಲಸ ಮಾಡುತ್ತಿದ್ದರು. ಅಷ್ಟು ಹಣವನ್ನು ಅವರು ಎಲ್ಲಿಂದ ತಂದರು ಎಂದರೆ ಸಾಕ್ಷಿ ದಾಖಲೆ ಎನು ಇದೆ ಎಂಬುವುದನ್ನು ನೋಡುತ್ತೇನೆ ಎನ್ನುತ್ತಾರೆ. ಸಿಕ್ಕರೆ ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿ ಹಾಜರುಪಡಿಸುತ್ತೇನೆ ಎನ್ನುತ್ತಾರೆ. ಮಗ ಮರಣ ಹೊಂದಿದ ನಂತರ ತಾಯಿ ಕೂಡಾ ಮಗನ ವಾರಸುದಾರಳಾಗುತ್ತಾಳೆ ಎಂಬುವುದು ಗೊತ್ತಿದ್ದರು ಕೂಡಾ ಆಕೆಯನ್ನು ಬಿಟ್ಟು ನಮ್ಮ ಹೆಸರನ್ನು ಮಾತ್ರ ನಮೂದು ಮಾಡಿಸಿಕೊಂಡಿರುತ್ತೇವೆಂದರೆ ಸಾಕ್ಷಿ ನನ್ನ ಅತ್ತೆ ಮನೆ ಮತ್ತು ಉಳಿದ ಆಸ್ತಿಗಳನ್ನು ದೊಡ್ಡ ಮಗನ ಹೆಸರಿಗೆ ಬರೆದಿದ್ದಾರೆಂದು ಗೊತ್ತಾದ ಕಾರಣ ನಾನು ಈ ರೀತಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಮನೆ ಮತ್ತು ಉಳಿದ ಆಸ್ತಿಗಳು ಎಂದರೆ ದಾವಾ ಆಸ್ತಿ 1 ಮತ್ತು 2 ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಾವಾ ಆಸ್ತಿ ನಂಬರ 1 ಮತ್ತು 2 ಇವುಗಳನ್ನು ದೊಡ್ಡ ಮಗನಿಗೆ ಗಿಫ್ಟ ಮಾಡಿದ್ದಕ್ಕೆ ನೀವು ಈ ದಾವಾ ಹಾಕಿದ್ದೀರಿ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ದೊಡ್ಡ ಮಗನಿಗೆ ಗಿಫ್ಟ ಮಾಡಿದ್ದಕ್ಕೆ ನಾನು ತಕರಾರು ಮಾಡಿದ್ದು ಆದರೆ ಚಿಕ್ಕ ಮಗನಿಗೆ ಗಿಫ್ಟ ಮಾಡಿದ್ದಕ್ಕೆ ತಕರಾರು ಮಾಡಲಿಲ್ಲವೆಂದರೆ ಸಾಕ್ಷಿ ನನ್ನನ್ನು ಮನೆಯಿಂದ ಅವರು ಹೊರಗಡೆ ಹಾಕಿದ್ದು ಎರಡು ಮಕ್ಕಳನ್ನು ಕರೆದುಕೊಂಡು ಏಲ್ಲಿಗೆ ಹೋಗಲಿ ಎಂದು ಸಾಕ್ಷಿ ನುಡಿಯುತ್ತಾರೆ. ಪ್ಲಾಟ ನಂಬರ 261 ಇದನ್ನು ಸಹ ದಾವಾ ಆಸ್ತಿ ಎಂದು ತೋರಿಸಿದರೆ ಅವರಿಗೂ ಸಹ ಪಾಲು ಹೋಗುತ್ತದೆ ಎಂಬ ಕಾರಣಕ್ಕೆ ಆ ಆಸ್ತಿಯನ್ನು ಈ ದಾವಾದಲ್ಲಿ ತೋರಿಸಿಲ್ಲವೆಂದರೆ ಸಾಕ್ಷಿ ನನ್ನ ಮನೆಯವರು ಆ ಆಸ್ತಿಗೆ ಹಣ ಕೊಟ್ಟಿದ್ದು ನಿಜ ಇರುತ್ತದೆ ಎನ್ನುತ್ತಾರೆ.

ಮದುವೆಯಾದ ನಂತರ ನಾನು, ನನ್ನ ಗಂಡ, ಹಾಗೂ ಉಳಿದ ಅತ್ತೆ-ಮಾವ ಇವರ ನಡುವೆ ನಿಮ್ಮ ಸಂಬಂಧ ಹೇಗೆ ಇತ್ತು ಎಂದರೆ ಸಾಕ್ಷಿ ನಾನು ಮದುವೆ ಆಗಿ ಬಂದಾಗಿನಿಂದ ನನ್ನ ನಾದನಿ ನಮ್ಮ ಮನೆಯಲ್ಲಿಯೆ ಇದ್ದು ಅವರಿಬ್ಬರ ಮಕ್ಕಳನ್ನು ನಾವೇ ಸಾಕಿರುತ್ತೇವೆ ಆಕೆ ಮನೆ ಬಿಟ್ಟು ಹೋಗಿದ್ದು ನನ್ನ ಮನೆಯವರು ಮರಣ ಹೊಂದಿದ ನಂತರ ಮತ್ತೆ ಬಂದಿರುತ್ತಾರೆ ಆ ಸಮಯದಲ್ಲಿ ನಾವು ಒಟ್ಟು ಕುಟುಂಬದಲ್ಲಿದ್ದು ಚೆನ್ನಾಗಿದೇವು ಎಂದು ನುಡಿಯುತ್ತಾರೆ. ನಾವು ಗಂಡ-ಹೆಂಡತಿ ಮದುವೆ ಆದಾಗಿನಿಂದಲೂ ಜಗಳ ಮಾಡಿಕೊಳ್ಳುತ್ತಾ ಇದ್ದೇವು ಅದೇ ರೀತಿ ಮನೆಯವರ ಜೊತೆ

ನಾನು ಜಗಳ ಮಾಡುತ್ತಿದ್ದೆ ಎಂದರೆ ಸಾಕ್ಷಿ ಅದು ಸುಳ್ಳು ಎನ್ನುತ್ತಾರೆ. ಮದುವೆಯಾದ 1-4 ದಿನಗಳ ನಂತರ ನಾನು ನನ್ನ ಅತ್ತೆ-ಮಾವನ ಜೊತೆ ಜಗಳ ಮಾಡಲು ಪ್ರಾರಂಬಿಸಿದೇನು ಎಂದರೆ ಅದು ಸುಳ್ಳು ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ಅತ್ತೆ ಮತ್ತು ಮಾವನ ಜೊತೆ ನಮ್ಮ ಸಂಬಂಧ ಸರಿಯಲ್ಲ ಎಂಬ ಕಾರಣಕ್ಕೆ ಅವರು ನಮಗೆ ಬೇರೆ ಮನೆ ಮಾಡಿ ಕಳುಹಿಸಿದರು ಎಂದರೆ ಸಾಕ್ಷಿ ಅದು ಸುಳ್ಳು ಎನ್ನುತ್ತಾರೆ. ದಿಃ06-03-2000 ಕ್ಕೆ ನನ್ನ ಮಾವನವರು ನನ್ನ ಯಜಮಾನರಿಗೆ ಮನೆ ಖಾಲಿ ಮಾಡುವಂತೆ ಒಂದು ಪತ್ರ ಬರೆದಿದ್ದರು ಎಂದು ಸಾಕ್ಷಿಗೆ ಪತ್ರ ತೋರಿಸಲಾಗಿ ಸಾಕ್ಷಿ ಅದೆಲ್ಲಾ ಸೃಷ್ಟಿ ಮಾಡಿದ್ದು ಎನ್ನುತ್ತಾರೆ. ಸದರಿ ನೋಟೀಸನ ರಜಿಸ್ಟರ ಪೋಸ್ಟ ಮೂಲಕ ನಮಗೆ ಕಳುಹಿಸಿದ್ದು ಅದಕ್ಕೆ ಸಂಬಂಧಿಸಿದ ರಶೀದಿ ಮತ್ತು ಅಂಚೆ ಸ್ವೀಕೃತಿ ಹಾಜರುಪಡಿಸಿದ್ದಾರೆ ಎಂದರೆ ಸಾಕ್ಷಿ ಇಲ್ಲ ಅದೆಲ್ಲಾ ಸುಳ್ಳು ಎನ್ನುತ್ತಾರೆ. ನೋಟೀಸ ಕಳುಹಿಸಿದರು ಕೂಡಾ ನಾವು ಮನೆ ಖಾಲಿ ಮಾಡದಿದ್ದಕ್ಕೆ ನನ್ನ ಮಾವ ಟೆಲಿಗ್ರಾಮ್ ಕಳುಹಿಸಿದ್ದರು ಎಂದರೆ ಸಾಕ್ಷಿ ಆ ದಾಖಲೆ ನೋಡಿ ಇದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅದೇ ರೀತಿ ದಿಃ03-05-2000 ರಂದು ಮತ್ತೊಂದು ರಜಿಸ್ಟರ್ ಪೋಸ್ಟ ಕಳುಹಿಸಿದರು ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಅವರು ನೋಟೀಸ ಕೊಟ್ಟ ಪ್ರಕಾರ ದಿಃ07-06-2000 ರಂದು ನಾವು ಮನೆ ಖಾಲಿ ಮಾಡಿ ನಾವು ಅದನ್ನು ಬರೆದುಕೊಟ್ಟಿರುತ್ತೇವೆಂದರೆ ಸಾಕ್ಷಿ ಮನೆ ಖಾಲಿ ಮಾಡಿದ್ದು ಹೌದು, ಆದರೆ ಬರೆದು ಕೊಟ್ಟಿರುವುದರಲ್ಲಿ ಇರುವ ಸಹಿ ನಮ್ಮ ಮನೆಯವರದು ಅಲ್ಲ ಎನ್ನುತ್ತಾರೆ. ನನ್ನ ಮಗುವಿನ ಬಾಣಂತನಕ್ಕೆ ನಾನು ಬಾಡಿಗೆ ಮನೆಗೆ 5 ತಿಂಗಳ ಹೋಗಿದ್ದೇವು ಎಂದು ನುಡಿಯುತ್ತಾರೆ. ಬಾಡಿಗೆ ಮನೆ ಎಂದರೆ ನವನಗರದಲ್ಲಿ ನಾವು ಇದ್ದ ಮನೆಯ ಮುಂದಿನ ಸಾಲಿನಲ್ಲಿ ಇದ್ದಂತಹ ಮನೆಯಲ್ಲಿದ್ದೇವು ಎಂದರೆ ಸರಿ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು, ನೀಡಿ ಮುಂದುಡಲಾಯಿತು.)

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ**